to the passing of this Bill which is opposed to the very principles of the natural justice and in protest, we would like to walk out from the House.

(*Some Opposition Members left the House*)

MR. DEPUTY SPEAKER :—The question is :

'That the Karnataka Private Educational Institutions (Discipline and Control) Bill, 1975 be passed.''

The motion was adopted and the Bill was passed

Opening of a Sugar Factory of Shimoga

ಶ್ರೀ ಕೋಣಂಡೂರು ಲಿಂಗಪ್ಪ :—ಒಂದು ತುರ್ತು ವಿಷಯವನ್ನು ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಈಗತಾನೇ ನನಗೆ ಟ್ರಂಕ್ ಕಾಲ್ ಬಂದ ಪ್ರಕಾರ ಶಿವಮೊಗ್ಗ ಸಕ್ಕರೆ ಕಾರ್ಖಾನೆಯವರು ಗೇಣಿದಾರರನ್ನು ಉಚ್ಚಾಟನೆ ಮಾಡುತ್ತಿದ್ದಾರೆ, ಮನೆಗಳನ್ನು ಮುರಿಯುತ್ತಿದ್ದಾರೆ. ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

MR. DEPUTY SPEAKER :—The best thing is to go to the Hon'ble Minister concerned and discuss the matter and see what best could be done in the matter.

INCLUSION OF OPPOSITION PARTY MEMBERS IN THE RECRUITMENT COMMITTEES

ಶ್ರೀ ಕಾಗೋಡು ತಿಮ್ಮಪ್ಪ :—ನಾವು ಬೆಳಿಗ್ಗೆ ಒಂದು ವಿಷಯವನ್ನು ಎಂದರೆ ರಿಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ವಿರೋಧ ಪಕ್ಷದವರಿಗೆ ಪ್ರಾತಿನಿಧ್ಯವನ್ನು ಕೊಡುವ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿ ಇರಲಿಲ್ಲ. ಆಗ ಅಧ್ಯಕ್ಷರು ಮುಖ್ಯ ಮಂತ್ರಿಗಳು ಸಭೆಯಲ್ಲಿದ್ದಾಗ ವಿಷಯವನ್ನು ಪ್ರಸ್ತಾಪ ಮಾಡಬಹುದು ಎಂದು ಹೇಳಿದರು. ಈಗ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿದ್ದಾರೆ. ವಿರೋಧ ಪಕ್ಷದ ನಾಯಕರು ಮುಖ್ಯ ಮಂತ್ರಿಗಳಿಗೆ ವಿರೋಧ ಪಕ್ಷದ ಸದಸ್ಯರ ಹೆಸರುಗಳ ಪಟ್ಟಿಯನ್ನು ಕಳುಹಿಸಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ನಾವು ತಿಳಿದು ಕೊಳ್ಳಬೇಕಾಗಿದೆ.

MR. DEPUTY SPEAKER :—I cannot permit at this stage. I have told Hon. Member epeatedly and candidly that it cannot be raised under Rules of Procedure. Even if somebody agreed, the *Rules* of Procedure cannot be violated. If he wants to raise the subject, he can raise it on someother day.

MYSORE UNIVERSITY (EXTENSION OF TERM OF OFFICE OF THE MEMBERS OF THE AUTHORITIES) BILL 1975

Motion to Consider

SRI M. MALLIKARJUNASWAMY (Minister for Education) :—Sir, I beg to move that the Mysore University (Extension of Term of Office of the Members of the Authorities) Bill 1975 be taken into consideration.

MR. DEPUTY SPEAKER :—Motion moved :

> "That the Mysore University (Extension of Term of Office of the Members of the Authorities) Bill, 1975 be taken into consideration".

‡ ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ :—ಸ್ವಾಮಿ, ಮೈಸೂರು ವಿಶ್ವವಿದ್ಯಾನಿಲಯದ (ಎಕ್ಸ್‌ಟೆನ್‌ಷನ್ ಆಫ್ ಟರ್ಮ್ ಆಫ್ ಆಫೀಸ್ ಆಫ್ ದಿ ಮೆಂಬರ್ಸ್ ಆಫ್ ದಿ ಅಥಾರಿಟೀಸ್) ಬಿಲ್ 1975 ಇದನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಈ ಶಾಸನ ಸಭೆಯ ಮುಂದೆ ಕಳೆದ ಅಧಿವೇಶನದಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯ ಇವುಗಳಿಗೆ ಸಂಬಂಧಪಟ್ಟಂತೆ ಏಕರೂಪವಾದ ಕಾನೂನನ್ನು ಮಾಡುವುದು ಇದ್ದುದರಿಂದ ಮತ್ತು ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಅಮೆಂಡ್‌ಮೆಂಟ್ ಆಕ್ಟ್ ಎಂದು ತೆಗೆದುಕೊಂಡು ಬಂದಿದ್ದು ಆ ಪ್ರಕಾರವಾಗಿ ವಿಶ್ವವಿದ್ಯಾನಿಲಯಗಳ ಕೆಲವು ಅಥಾರಿಟಿಗಳ ಅವಧಿಯನ್ನು 1974ರ ಡಿಸೆಂಬರ್ ಕೊನೆಯವರೆಗೆ ವಿಸ್ತರಿಸಲಾಯಿತು. ಆದರೆ ಏಕರೂಪವಾದ ಕಾನೂನು ಇನ್ನೂ ಆಗದೆ ಇರುವುದರಿಂದ ಡಿಸೆಂಬರ್ ತಿಂಗಳಿನಲ್ಲಿ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕಾಯಿತು. ಅಕಾಡೆಮಿಕ್ ಕೌನ್ಸಿಲ್ ಒಂದನ್ನು